

## ಪದಸಂಪತ್ತು ಹೆಚ್ಚಿಸಿಕೊಳ್ಳಿ

ಅನೇಕ ಮಕ್ಕಳಿಗೆ ವಿಷಯ ಅರ್ಥವಾಗಿರುತ್ತೆ. ಆದರೆ ಅದನ್ನು ಅಭಿವ್ಯಕ್ತಿಸಲು ಬೇಕಾದ ಪದಸಂಪತ್ತು ಇರುವುದಿಲ್ಲ. ಪದಸಂಪತ್ತನ್ನು ಪರೀಕ್ಷೆ ಸಮಯದಲ್ಲಿ ಬೆಳೆಸಿಕೊಳ್ಳಲು ಆಗುವುದಿಲ್ಲ. ಆದರೆ ಬಳಸುವ ಪದಗಳ ಕಾಗುಣಿತ, ಸ್ಪೆಲ್ಲಿಂಗ್, ವ್ಯಾಕರಣ ಶುದ್ಧತೆಯನ್ನು ಖಾತ್ರಿಪಡಿಸಿಕೊಳ್ಳಲು ಅವಕಾಶವಂತೂ ಖಂಡಿತ ಇದೆ. ಪೋಷಕರು ಮಕ್ಕಳಿಂದ ಪಾಠ ಕೇಳುವ ಪ್ರಯತ್ನ ಮಾಡಿದರೆ ಮಕ್ಕಳು ತಾವು ಅರ್ಥ ಮಾಡಿಕೊಂಡಿದ್ದನ್ನು ಯಾವ ಪದಗಳನ್ನು ಬಳಸಿ ಅಭಿವ್ಯಕ್ತಿಸಬೇಕು ಎಂದು ಯೋಚಿಸುತ್ತಾರೆ. ಸಂವಾದ ಮತ್ತು ಬರೆಯುವ ಅಭ್ಯಾಸ ಬೆಳೆದಷ್ಟೂ ಪದಸಂಪತ್ತು ಬೆಳೆಯುತ್ತೆ, ಅಭಿವ್ಯಕ್ತಿ ಸುಲಭವಾಗುತ್ತೆ. ಸಮಾಜ ವಿಜ್ಞಾನ ಮತ್ತು ಭಾಷೆಯಲ್ಲಿ ಹೆಚ್ಚು ಅಂಕ ಗಳಿಸಲು ಈ ಪ್ರಯೋಗ ನೆರವಾಗುತ್ತೆ.

### ಮೊದಲೇ ಓದಿದ್ದೇನೆ, ಈಗೇನು ಮಾಡಲಿ

ಸ್ಕೂಲ್ ಶುರುವಾದ ಕಾಲದಿಂದ ಚೆನ್ನಾಗಿ ಓದಿಕೊಂಡಿರುವ ಮಕ್ಕಳಿಗೆ ಓದಿದ್ದು ಮರೆಯದೆ ಉಳಿಯಲು ಏನು ಮಾಡಬೇಕು ಎನ್ನುವ ಪ್ರಶ್ನೆ. ಈ ಪ್ರಶ್ನೆಗೆ ತಜ್ಞರ ಉತ್ತರ, 'ಕಣ್ಣೆದುರಿನಲ್ಲಿದ್ದರೆ ಮನಸಿನಲ್ಲಿಯೂ ಉಳಿಯುತ್ತೆ'.

- ಇಡೀ ಪಾಠದ ಸಾರವನ್ನು ಹೇಳುವ ಪದಗಳನ್ನು (ಕೀವರ್ಡ್ಸ್) ಗುರುತಿಸಿಕೊಳ್ಳಿ. ಉದಾ: ಅಶೋಕನ ಜೀವನದ ಬಗೆಗಿನ ಪಾಠ ಎಂದಿಟ್ಟುಕೊಳ್ಳೋಣ. ಆಗ ಕಳಿಂಗ ಯುದ್ಧ, ಬೌದ್ಧಭಿಕ್ಷು, ಧರ್ಮ ಪ್ರಸಾರ ಎನ್ನುವ ಪದಗಳು ಕೀವರ್ಡ್ಸ್ ಆಗಬಹುದು.
- ಪ್ರಮುಖ ಪದಗಳನ್ನು ಸಣ್ಣ ಚೀಟಿಗಳಲ್ಲಿ ಬರೆದು ಗೋಡೆ, ಫ್ರಿಡ್ಜ್, ಕನ್ನಡಿ, ಬಾಗಿಲು, ಬಟ್ಟೆ ನೇತುಹಾಕುವ ಜಾಗ... ಹೀಗೆ ನಿಮ್ಮ ಕಣ್ಣಿಗೆ ಹೆಚ್ಚು ಬೀಳುವ ಸ್ಥಳಗಳಲ್ಲಿ ಅಂಟಿಸಿಕೊಳ್ಳಿ.
- ಇತಿಹಾಸದ ಇಸವಿಗಳು, ಗಣಿತದ ಸೂತ್ರಗಳು, ಭೌತಶಾಸ್ತ್ರದ ನಿಯಮಗಳು, ರಸಾಯನಶಾಸ್ತ್ರದ ಪ್ರಯೋಗದ ಹಂತಗಳನ್ನೂ ಬರೆದುಕೊಳ್ಳಬಹುದು.
- ಭಾಷಾಪಠ್ಯದಲ್ಲಿ (ಇಂಗ್ಲಿಷ್, ಕನ್ನಡ, ಹಿಂದಿ, ಸಂಸ್ಕೃತ) ಕಠಿಣ ಶಬ್ದಗಳು, ಕವಿ–ಕಾವ್ಯ ಪರಿಚಯವನ್ನು ಹೀಗೆ ಬರೆದುಕೊಳ್ಳಬಹುದು.
- ಹೀಗೆ ಮಾಡುವುದರಿಂದ ವಿಷಯದ ಬಗ್ಗೆ ಪ್ರೀತಿ ಬೆಳೆಯುತ್ತೆ. 'ನನಗೆ ಗಣಿತ ಅರ್ಥವಾಗಲ್ಲ, ಭೌತಶಾಸ್ತ್ರ ತಲೆಗೆ ಹೋಗಲ್ಲ' ಇತ್ಯಾದಿ ಪೂರ್ವಗ್ರಹಗಳು ದೂರವಾಗುತ್ತವೆ.
- ಪಾಠ, ಪದ್ಯ, ಸೂತ್ರಗಳನ್ನು ಜೋರಾಗಿ ಓದಿ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಳ್ಳಿ. ಬಸ್ಸುಗಳಲ್ಲಿ, ಮನೆಯಲ್ಲಿ ಬಿಡುವಿನ ಸಮಯ ಇದ್ದಾಗ ಅದನ್ನು ಕೇಳಿಸಿಕೊಳ್ಳಿ. ಓದಿದ ಪಾಠ ಮನನ ಮಾಡಿಕೊಳ್ಳಲು ಇದು ನೆರವಾಗುತ್ತೆ.

### ಇಲ್ಲಿಂದಾಚೆಗೆ ಓದಿದ್ರೆ ಪಾಸಾಗ್ತೀನಾ

ಈ ಪ್ರಶ್ನೆ ನಿಮ್ಮ ಮನಸ್ಸಿಗೆ ಬಂದಿದೆ ಎಂದರೆ ನಿಮಗೆ ಓದುವ ಆಸಕ್ತಿ ಮೂಡಿದೆ ಎಂದೇ ಅರ್ಥ. 'ಓದುವುದು' ಎನ್ನುವುದು ಅಧ್ಯಯನ ಎನ್ನುವ ಒಂದು ದೊಡ್ಡ ಪರಿಕಲ್ಪನೆಯ ಭಾಗ ಮಾತ್ರ. ಒಂದು ವಿಷಯವನ್ನು ನಾವು ಓದಿಯೇ ಅರ್ಥ ಮಾಡಿಕೊಳ್ಳಬೇಕಿಲ್ಲ. ಪಾಠಗಳನ್ನು ಕೇಳಿಸಿಕೊಳ್ಳುವ ಮೂಲಕ, ಚರ್ಚೆಗಳಲ್ಲಿ ಭಾಗವಹಿಸುವ ಮೂಲಕ, ಫ್ರೆಂಡ್ಸ್ ಜೊತೆಗೆ ಆಡುವಾಗ, ಟೀವಿ ಕಾರ್ಯಕ್ರಮಗಳಲ್ಲಿ ಹೀಗೆ ಹತ್ತಾರು ಮಾಧ್ಯಮಗಳ ಮೂಲಕ ಪಾಠಗಳನ್ನು ಕಲಿಯುತ್ತಲೇ ಇರುತ್ತೇವೆ. ಆದರೆ ಅದನ್ನು ಪರೀಕ್ಷೆಗೆ ಅನ್ವಯಿಸಿ ಯೋಚಿಸುವುದನ್ನು ರೂಢಿಸಿಕೊಳ್ಳುವ ಕಲೆಯನ್ನು ರೂಢಿಸಿಕೊಳ್ಳಬೇಕಾಗಿದೆ. ತಡವಾಗಿ ಎಚ್ಚೆತ್ತುಕೊಂಡವರು ಈ ಅಂಶವನ್ನು ಗಮನಿಸಬೇಕು. ಏಕಾಂಗಿಯಾಗಿ ಪಠ್ಯಕ್ರಮವನ್ನು ಪೂರ್ತಿ ಓದಿಯೇ ಮುಗಿಸುತ್ತೇನೆ ಎನ್ನುವ ಹಟ ಬಿಡಿ. ಹಳೆಯ ಪ್ರಶ್ನಪತ್ರಿಕೆಗಳನ್ನು ಬಿಡಿಸುವುದು, ಪ್ರಿಪರೇಟರಿ ಪರೀಕ್ಷೆಗಳಲ್ಲಿ ಬಂದಿರುವ ಪ್ರಶ್ನೆಗನ್ನು ಗಮನಿಸಿಕೊಳ್ಳುವುದು, ಚೆನ್ನಾಗಿ ಓದಿರುವ ವಿದ್ಯಾರ್ಥಿಗಳ ಜೊತೆಗೆ ಸೌಜನ್ಯದ ಒಡನಾಟ, ಗ್ರೂಪ್ ಡಿಸ್ಕಷನ್‌ಗಳಿಂದ ಖಂಡಿತ ಲಾಭವಿದೆ. ಮೊದಲಿನಿಂದಲೂ ಪರೀಕ್ಷೆಗೆ ಚೆನ್ನಾಗಿ ಸಿದ್ಧತೆ ಮಾಡಿಕೊಂಡಿರುವ ವಿದ್ಯಾರ್ಥಿಗಳು ನಿಮಗೆ ಪರೀಕ್ಷಾ ದೃಷ್ಟಿಯಿಂದ ಮುಖ್ಯವೆನಿಸುವ ಅಂಶಗಳನ್ನು ವಿವರಿಸಬಲ್ಲರು.

### ಬರೆದು ಅಭ್ಯಾಸ ಮಾಡಿ

ನಿಮಗೇನು ಗೊತ್ತಿದೆ ಹಾಗೂ ನೀವು ಏನೆಲ್ಲಾ ಓದಿಕೊಂಡಿದ್ದೀರಿ ಎನ್ನುವುದನ್ನು ಪರೀಕ್ಷೆಯಲ್ಲಿ ಬರೆದೇ ತಿಳಿಸಬೇಕು. ಕೆಲ ಮಕ್ಕಳು ಪರೀಕ್ಷೆಯಲ್ಲಿ ಸರಿಯಾಗಿ ಬರೆಯುವುದಿಲ್ಲ. ಆದರೆ ಪರೀಕ್ಷೆ ಮುಗಿಸಿ ಹೊರಗೆ ಬಂದಾಗ ಅಮ್ಮನ ಎದುರು ಎಲ್ಲ ಪ್ರಶ್ನೆಗಳಿಗೂ ಉತ್ತರ ಹೇಳುತ್ತವೆ. ವಿದ್ಯಾರ್ಥಿಗೆ ಉತ್ತರ ಗೊತ್ತಿದ್ದರೂ ಅದನ್ನು ಸರಿಯಾಗಿ ಬರೆಯಲು ಸಾಧ್ಯವಾಗದ ಕಾರಣ ಕಡಿಮೆ ಅಂಕ ಬಂದಿರುತ್ತೆ.

'ಬರವಣಿಗೆಯ ತಂತ್ರಗಳ ಕಡೆಗೆ ಗಮನ ಕೊಡದಿರುವುದೇ ಇದಕ್ಕೆ ಕಾರಣ. ಯಾವುದೇ ವಿಷಯವನ್ನು ಓದುವಾಗ ಕೇವಲ ನಮ್ಮ ಕಣ್ಣು ಕೆಲಸ ಮಾಡುತ್ತೆ. ಬರವಣಿಗೆ ಹಾಗಲ್ಲ. ಕಣ್ಣು, ಕೈ ಮತ್ತು ಮನಸ್ಸು ಏಕತ್ರವಾಗಿ ಗಮನ ಕೊಡಬೇಕು.

SSLC-PUC